ಸಾಕ್ಷಿಯನ್ನು ದಿಃ 12-08-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಆರ್.ಜಿ.ಕೆ ಪ್ರತಿವಾದಿ ಪರ ವಕೀಲರಿಂದ

ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಆಸ್ತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ. 1 ನೇ ಪ್ರತಿವಾದಿಯ ಸಹೋದರ ಮತ್ತು ಸಹೋದರಿಯರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 1 ನೇ ಪ್ರತಿವಾದಿಗೆ ಪಿತ್ರಾರ್ಜಿತ ಆಸ್ತಿ ಇರಬಹುದು ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ವಾದಿ ಮತ್ತು ಪ್ರತಿವಾದಿಯ ಮೂಲ ಪುರುಷ ಠಾಕಪ್ಪ ಎಂದರೆ ಸರಿ. ಠಾಕಪ್ಪನ ಹೆಂಡತಿಯ ಹೆಸರು ನಿಂಗವ್ವ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರಿಬ್ಬರಿಗೂ ಒಟ್ಟು ಮೂರು ಜನ ಮಕ್ಕಳು ಇರುತ್ತಾರೆಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರೆಂದರೆ ಶಾಂತವ್ವ, ಕಮಲವ್ವ, ದ್ಯಾಮಪ್ಪ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ. ಎ ಬಿ ಸಿ ವಾದಿ ಮತ್ತು ಪ್ರತಿವಾದಿಯ ಕುಟುಂಬಕ್ಕೆ ಹೇಗೆ ಬಂದಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ವಾದಿ ಮತ್ತು ಪ್ರತಿವಾದಿಯ ಕುಟುಂಬ ಒಕ್ಕಲುತನದ ಕುಟುಂಬ ಎಂದರೆ ಸರಿ. ಸರ್ವೆ ನಂ. 2 ಮೂಲತಃ ಠಾಕಪ್ಪ ವ್ಯವಸಾಯ ಮಾಡುತ್ತಿದ್ದ ಎಂದರೆ ಸರಿ. ಸದರಿ ಜಮೀನಿನ ಮೇಲೆ ಠಾಕಪ್ಪನಿಗೆ ರೈತಾಪಿ ಹಕ್ಕನ್ನು ನೀಡಿರುತ್ತಾರೆಂದರೆ ಸರಿ. ನಾನು ಆಸ್ತಿಯನ್ನು ಖರೀದಿ ಮಾಡುವ ವೇಳೆ ಠಾಕಪ್ಪನಿಗೆ ಹೆಣ್ಣು ಮಕ್ಕಳು ಇದ್ದ ಬಗ್ಗೆ ಮಾಹಿತಿ ಇರುವುದಿಲ್ಲ. ನಾನು ಖರೀದಿ ಮಾಡುವ ಮಧ್ಯ ವಾದಿ ಪ್ರತಿವಾದಿಯ ಕುಟುಂಬದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಕಲೆ ಹಾಕಿರುತ್ತೇನೆಂದರೆ ಸರಿ. ವಾದಿ ಮತ್ತು ಪ್ರತಿವಾದಿಯರು ಠಾಕಪ್ಪನ ವಾರಸುದಾರರು ಇದ್ದು ಅವರು ಮೃತಪಟ್ಟ ನಂತರ ಅವರಿಗೆ ಕುಟುಂಬದಲ್ಲಿ ಅಡಚಣೆಗಳು ಇರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ಇದ್ದ ಅಡಚಣೆಯ ಬಗ್ಗೆ ನಾನು ವಿಚಾರಿಸಲು ಹೋಗಿರುವುದಿಲ್ಲ. ನಾನು ಆಸ್ತಿ ಖರೀದಿ ಮಾಡುವ ವೇಳೆ ನಾನು ಖರೀದಿ ಮಾಡಿದ ಆಸ್ತಿಯಲ್ಲಿ ಹಕ್ಕು ಅಧಿಕಾರ ಇದ್ದ ಬಗ್ಗೆ ಮಾಹಿತಿ ಇರುತ್ತಿತ್ತು. ಠಾಕಪ್ಪ ಸಾಯುವ ಕಾಲಕ್ಕೆ ಯಾವುದೇ ರೀತಿಯ ದಾಖಲೆ ಪತ್ರಗಳನ್ನು ಬರೆದು ಆಸ್ತಿ ವಿಲೇವಾರಿ ಮಾಡಿರುವುದಿಲ್ಲ. ಸರ್ವೆ ನಂ. 2 ಊರಿಗೆ ಹೊಂದಿಕೊಂಡು ಜಮೀನು ಇದ್ದು ಅವುಗಳಲ್ಲಿ ನಿವೇಶನಗಳು ಆಗಿರುತ್ತವೆ ಎಂದರೆ ಸರಿ. ಆದ್ದರಿಂದ ಅದರ ಬೆಲೆ ಹೆಚ್ಚಿರುತ್ತದೆ ಎಂದರೆ ಸರಿಯಲ್ಲ. ಠಾಕಪ್ಪ ಕುಟುಂಬದವರಿಗೆ ಹಣದ ಅಡಚಣೆ ಇರಲಿಲ್ಲ ನಾನು ಮತ್ತು 1 ನೇ ಪ್ರತಿವಾದಿ ಸೇರಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ. ನಾನು

ಆಸ್ತಿ ಖರೀದಿ ಮುನ್ನ ಯಾವುದೇ ರೀತಿಯ ನೋಟಿಸನ್ನು ನೀಡಿರುವುದಿಲ್ಲ. ವಾದಿಯರ ಹಕ್ಕು ಅಧಿಕಾರಿವನ್ನು ಕಸಿದುಕೊಳ್ಳುವ ಉದ್ದೇಶದಿಂದ ಸುಳ್ಳು ಕಾಗದ ಪತ್ರಗಳನ್ನು ಸೃಷ್ಟಿಸಿರುತ್ತೇವೆಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಅದೆ.

Sd/-12.08.2025
ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾದಂ. ಲಕ್ಷ್ಮೇಶ್ವರ

ಸಾಕ್ಷಿದಾರರ ಸಹಿಃ sd/-